# ಅರಿವಿನ ಕಾಲ

ಕೊರೊನಾದಿಂದ ಒದಗಿದ ಗೃಹಬಂಧನ ಅನೇಕರನ್ನು ಚಡಪಡಿಸುವಂತೆ ಮಾಡಿದೆ. ಆರೋಗ್ಯಕರ ಹವ್ಯಾಸಗಳಿಲ್ಲದವರನ್ನು ಸುಸ್ತುಗೊಳಿಸಿದೆ. ಮೊದಲಿನಿಂದಲೂ ಹೊರಗೇ ಓಡಾಡಿಕೊಂಡಿದ್ದವರಿಗೆ ಮನೆ ಜೈಲಾಗಿಯೂ ಹೊಸದಾಗಿಯೂ ಕಾಣತೊಡಗಿದೆ. ಸಾಹಿತ್ಯ, ಸಂಗೀತ, ಸಿನಿಮಾದಂತಹ ಲಲಿತಕಲೆಗಳಲ್ಲಿ ತೊಡಗಿಸಿಕೊಂಡವರಿಗೆ ಕಡ್ಡಾಯ ಬಂಧನ ಚಡಪಡಿಕೆ ಉಂಟು ಮಾಡಿಲ್ಲ. ಲೌಕಿಕ ಜಗತ್ತಿನಲ್ಲಿ ಏಳಲಾಗದೆ ಮುಳುಗಿದವರಿಗೆ ಕೊಂಚ ಅಡಚಣೆ ಆಗಿದೆಯಷ್ಟೆ.

ಮನುಷ್ಯ ಸ್ವಾತಂತ್ರ್ಯದ ಮಹತ್ವವನ್ನು ಮತ್ತು ಎಲ್ಲ ಇದ್ದೂ ಮರುಕ್ಷಣದಲ್ಲಿ ಏನೂ ಇಲ್ಲದಂತಾಗುವ ಬದುಕಿನ ಸಂಕ್ಷಿಪ್ತತೆಯನ್ನು ಅನೇಕರಿಗೆ ಈ ಗೃಹಬಂಧನ ಮೊದಲ ಬಾರಿಗೆ ಅರಿವಿಗೆ ತಂದಿದೆ. ಇಲ್ಲಿ ಹೊತ್ತು ಕಳೆಯುವುದಷ್ಟೇ ಮುಖ್ಯವಲ್ಲ. ವ್ಯಕ್ತಿತ್ವವನ್ನು ಪ್ರತಿ ಕ್ಷಣ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವುದು ಹೇಗೆ ಎಂಬುದೂ ಮುಖ್ಯ. ಅದನ್ನು ಬಲ್ಲವರಿಗೆ ಈ ದಿಗ್ಬಂಧನ ದುಗುಡದ ಜೊತೆಗೆ ಆನಂದವನ್ನೂ ತಂದಿದೆ. ಕುವೆಂಪು, ಕಾರಂತ, ಮಾಸ್ತಿ, ಡಿ.ವಿ.ಜಿ., ಲಂಕೇಶ್, ತೇಜಸ್ವಿ, ಚಿತ್ತಾಲ, ಅನಂತಮೂರ್ತಿ ಅವರಂತಹ ಲೇಖಕರನ್ನು ಮರುಭೇಟಿ ಮಾಡಲು, ದ.ರಾ. ಬೇಂದ್ರೆ, ನರಸಿಂಹಸ್ವಾಮಿ, ಅಡಿಗ, ಜಿ.ಎಸ್. ಶಿವರುದ್ರಪ್ಪ, ನಿಸಾರ್ ಅಹಮದ್ ಅವರ ಕವಿತೆಗಳನ್ನು ಎದುರುಗೊಳ್ಳಲು ಇದಕ್ಕಿಂತ ಉತ್ತಮ ಸಮಯ ಬೇರೊಂದಿಲ್ಲ. ಸಿನಿಪ್ರಿಯರಿಗೆ ನೋಡಲು ಜಗತ್ತಿನ ಶ್ರೇಷ್ಠ ಸಿನಿಮಾಗಳು ಸಾಲುಗಟ್ಟಿದ್ದರೆ, ಸಂಗೀತಲೋಕದ ಮಾಂತ್ರಿಕರು ಕೇಳುಗರನ್ನು ಶಾಂತಗೊಳಿಸಲು, ಹುರಿದುಂಬಿಸಲು ಕಾದಿರುತ್ತಾರೆ. ತೊಡಗಿಸಿಕೊಳ್ಳುವ ಮನಸಿದ್ದರೆ ಆನ್‌ಲೈನ್‌ನಲ್ಲಿ ಓದುವುದು, ಕೇಳುವುದು, ನೋಡುವುದು ಈಗ ಸರಾಗ. ಪ್ರತಿಯೊಬ್ಬ ಉತ್ತಮ ಲೇಖಕ, ಗಾಯಕ, ಸಿನಿನಿರ್ದೇಶಕನೂ ಹೊಸ ಜಗತ್ತನ್ನು ಸೃಷ್ಟಿಸಿದವನೇ ಆಗಿರುತ್ತಾನೆ. ಆ ಪ್ರತಿಯೊಂದು ಜಗತ್ತೂ ತನಗೆತಾನೇ ಭಿನ್ನ, ವಿಶಿಷ್ಟ. ಅವನ್ನು ಒಳಗೊಳ್ಳುತ್ತ ಹೋದಹಾಗೆ ನಮ್ಮ ಸಂವೇದನೆ ಹರಿತವಾಗುತ್ತದೆ, ಸೂಕ್ಷ್ಮವಾಗುತ್ತದೆ; ಅರ್ಥದ ಹೊಸ ಬಾಗಿಲುಗಳು ತೆರೆಯುತ್ತವೆ.



ನಮ್ಮ ದೈನಿಕದ ವಿಕಾರಗಳಿಗೆ ಗಾಂಧೀಜಿಯವರ ಸರಳತೆ ಮತ್ತು ಸ್ವಾವಲಂಬನೆಯ ತತ್ವಗಳು ಮದ್ದಾಗಬಲ್ಲವು ಎಂಬುದನ್ನು ಅರಿವಿಗೆ ತಂದ ಕಾಲವಿದು. ಇದು ನೆಮ್ಮದಿಯ ಬದುಕಿಗೆ ಏನು ಬೇಕು, ಎಷ್ಟು ಬೇಕು ಎಂಬುದನ್ನು ಸಹ ನಮಗೆ ಮನಗಾಣಿಸಿದೆ. ಇಂತಹ ವೇಳೆಯಲ್ಲಿ ಯಾವುದೇ ಅತ್ಯುತ್ತಮ ಕಲೆ ಮತ್ತು ಸಾಹಿತ್ಯ ಕಡೆಯಪಕ್ಷ ನಮ್ಮೊಂದಿಗೆ ನಾವು ಇರುವುದನ್ನು, ಮಾತನಾಡಿಕೊಳ್ಳುವುದನ್ನು, ಯೋಚಿಸುವುದನ್ನು ಕಲಿಸುತ್ತವೆ; ಸಹ ಜೀವಿಗಳ ನೋವನ್ನು ಅನುಕಂಪದಿಂದ, ಅಂತಃಕರಣದಿಂದ ನೋಡುವುದನ್ನು ಹೇಳಿಕೊಡುತ್ತವೆ. ಇವನ್ನೆಲ್ಲ ಕೊರೊನಾ ಕಾಲದ ಬಿಡುವಿನಲ್ಲಿ ಓದು, ಸಿನಿಮಾ, ಸಂಗೀತಗಳಿಂದ ಕಲಿತಿದ್ದರೆ ಅದಕ್ಕಾಗಿ ಕೊಟ್ಟ ಸಮಯ ಸಾರ್ಥಕ. ಇಂತಹ ಪೊರೆ ಬಿಟ್ಟು ಹೊಸದಾಗುವ ಕ್ಷಣಗಳು ಕೂಡ ಮನುಷ್ಯನಿಗೆ ಬೇಕಾಗುತ್ತವೆ.

ಈ ಸಂಚಿಕೆಯಲ್ಲಿ ಕವಿ ಸತ್ಯಾನಂದ ಪಾತ್ರೋಟರ ಅನನ್ಯ ಸಂದರ್ಶನವಿದೆ. ಕತೆಗಳು, ವಿಶಿಷ್ಟ ಪ್ರಬಂಧಗಳು ಬಿಡುವಿನ, ಏಕಾಂತದ ಕ್ಷಣಗಳಲ್ಲಿ ಓದುಗರಿಗೆ ಜೊತೆಯಾಗಬಲ್ಲವು.

**ಸಂದೀಪ ನಾಯಕ**